ಆ) ಅ) ಜಿಲ್ಲಾ ರಂಗಮಂದಿರ ನಿರ್ಮಾಣವಾಗಿಲ್ಲ ಆದರೆ ಜಿಲ್ಲೆಯಲ್ಲಿ ನಿರ್ಮಾಣಗೊಳಿಸಿರುವ ಬಯಲು ರಂಗಮಂದಿರಗಳ ಸಂಖ್ಯೆ 16 ಆಗಿದ್ದು ಇವುಗಳಲ್ಲಿ 10 ಪೂರ್ಣಗೊಂಡಿದ್ದು. 6 ಪ್ರಗತಿಯಲ್ಲಿವೆ.

ಆ) ಕರ್ಬಗಿ, ಬ್ಯಾಡಗಿ, ಹಾನಗಲ್‌ನಲ್ಲಿ ಶೇ.40 ರಷ್ಟು ರಟ್ಟಿಹಳ್ಳಿ, ಹಿರೇಕೆರೂರಿನಲ್ಲಿ ಶೇ.30 ರಷ್ಟು ಕೆಲಸವಾಗಿದೆ. ಹಾವೇರಿಯಲ್ಲಿ ಕೆಲಸ ಪ್ರಾರಂಭವಾಗ ಬೇಕಾಗಿದೆ.

ಇ) ಹಾವೇರಿ ಜಿಲ್ಲೆಯಲ್ಲಿ 57 ಜನಸಾಹಿತಿ–ಕಲಾವಿದರಿಗೆ ಮಾಸಾಶನವನ್ನು ಮಂಜೂರುಮಾಡಲಾಗಿದೆ.

ಈ) ಅ) ಮಂಜೂರಾತಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ 118.

ಆ) ಹಾವೇರಿ–24, ಬ್ಯಾಡಗಿ–15,ಶಿಗ್ಗಾಂವ–09, ಹಿರೇಕೆರೂರು–20, ಹಾನಗಲ್–10, ರಾಣೆಬೆನ್ನೂರು–32, ಸವಣೂರು–8

ಉ) 2002 ರಿಂದ 2005 ರ ಮಾರ್ಚಿ 31 ರವರೆಗೆ ಒಟ್ಟು 93 ಸಂಘ ಸಂಸ್ಥೆಗಳಿಗೆ ವೇಷಭೂಷಣ ಹಾಗೂ ವಾದು ಪರಿಕರಗಳನ್ನು ಕೊಳ್ಳಲು ಧನಸಹಾಯ ಮಾಡಲಾಗಿದೆ.

ಊ) 1. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಕಲಾವಿದರಿಗೆ ವಿಶೇಷ ಘಟಕ ಯೋಜನೆಯಡಿ ಸಾಂಸ್ಕೃತಿಕ ಸಾಹಿತ್ಯಕ ಕಾರ್ಯಕ್ರಮಗಳನ್ನು ಕೊಟ್ಟು ಹಾಗೂ ಕಾರ್ಯಕ್ರಮಗಳನ್ನು ಪ್ರಾಯೋಜಿಸಿ ಪ್ರೋತ್ಸಾಹ ನೀಡಲಾಗುತ್ತಿದೆ.

2. ವಾದ್ಯ ಪರಿಕರ ಹಾಗೂ ವೇಷ ಭೂಷಣಗಳನ್ನು ಕೊಳ್ಳಲು ಧನಸಹಾಯ ಮಾಡಲಾಗಿದೆ.

3. ಗುರು–ಶಿಷ್ಯ ಪರಂಪರೆ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಮಕ್ಕಳಿಗೆ ಸಂಗೀತ ತರಬೇತಿ ಕುರಿತು ಕಲಿಕೆ ಕೇಂದ್ರ ನಡೆಸಲಾಗಿದೆ.

4. ಪರಂಪರೆ ಘೋಷಣೆ ಯೋಜನೆಯಡಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಶಹನಾಯ್ ಕಲಿಕಾ ಕೇಂದ್ರವನ್ನು ನಡೆಸಲಾಗಿದೆ.

**3589 (4328) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) – ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?**

ಅ) ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿಟ್ಲ ಮತ್ತು ಬಿ.ಸಿ.ರೋಡ್ ಪ್ರದೇಶದಲ್ಲಿ ಕೆ.ಎಸ್.ಆರ್.ಟಿ.ಸಿ.ಬಸ್ ನಿಲ್ದಾಣವಾಗದೇ ಇರುವುದು ಸರ್ಕಾರದ ಗಮನದಲ್ಲಿದೆಯೆ;ಹಾಗಿದ್ದಲ್ಲಿ ಆ ಕುರಿತಾದ ಸರ್ಕಾರದ ಕ್ರಮಗಳೇನು ;

ಆ) ಗ್ರಾಮಾಂತರಗಳ ಕೇಂದ್ರ ಪ್ರದೇಶವಾದ ವಿಟ್ಲ ಮತ್ತು ಬಿ.ಸಿ. ರೋಡ್‌ಗಳಲ್ಲಿ ಕೂಡಲೇ ಬಸ್ ನಿಲ್ದಾಣದ ವ್ಯವಸ್ಥೆಯನ್ನು ಮಾಡಿ ಪ್ರಯಾಣಿಕರಿಗೆ ಅನುಕೂಲಮಾಡಿಕೊಡಲು ಸರ್ಕಾರದ ಕ್ರಮಗಳೇನು; ಹಾಗಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು ?

**ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)–**

ಅ) ಗಮನದಲ್ಲಿದೆ.

ವಿಟ್ಲ ಮತ್ತು ಬಿ.ಸಿ.ರೋಡ್ ಬಸ್ ನಿಲ್ದಾಣಕ್ಕಾಗಿ ಕ್ರಮವಾಗಿ 1.00ಎಕರೆ ಮತ್ತು 4.04 ಎಕರೆ ನಿವೇಶನವನ್ನು ಪಡೆಯಲಾಗಿದೆ.

ಆ) ಸಂಸ್ಥೆಯ ಆರ್ಥಿಕ ಲಭ್ಯತೆಯಮೇಲೆ ಮುಂದಿನ ದಿನಗಳಲ್ಲಿ ಕ್ರಮ ಜರುಗಿಸಲಾಗುವುದು.

**3590 (4542) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) – ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?**

ಅ) ಸರ್ಕಾರಿ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆಯ ಅನುಷ್ಠಾನವನ್ನು ಯಾವ ಅವಧಿಯಲ್ಲಿ ಜಾರಿಗೆ ತರಲಾಯಿತು, ಮಾಹಿತಿಯ ಪ್ರಕಾರ 375 ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆಯ ಸೌಲಭ್ಯವನ್ನು ಒದಗಿಸಲಾಗಿದೆ ;

ಆ) ಸ್ವಯಂ ನಿವೃತ್ತಿ ಯೋಜನೆಯ ಘೋಷಣೆಯಾದ ನಂತರ ನಿವೃತ್ತಿ ಬಯಸಿ ಅರ್ಜಿ ಸಲ್ಲಿಸಿದ ನೌಕರರ ಸಂಖ್ಯೆ ಎಷ್ಟು ; ಅವುಗಳಲ್ಲಿ ತಿರಸ್ಕೃತ ಮತ್ತು ಪುರಸ್ಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು ;